ಈಗಿನ ಕಾಲೇಜು ಯುವಕರ ಮೆಚ್ಚಿನ ಬೈಕ್ ಯಾವುದೆಂದು ಕೇಳಿ ನೋಡಿ. ಬಹುತೇಕರು ಥಟ್ಟನೆ, 'ಕೆಟಿಎಂ ಡ್ಯೂಕ್, ಬಜಾಜ್ ಡಾಮಿನಾರ್' ಎನ್ನುತ್ತಾರೆ. ರಸ್ತೆಗಳಲ್ಲಿ ಕೀರಲು ಶಬ್ದ ಮಾಡುತ್ತಾ, ಕ್ಷಣ ಮಾತ್ರದಲ್ಲಿ ಮಿಂಚಿ ಮರೆಯಾಗುವ ಈ ಬೈಕ್‌ಗಳ ಅಭಿಮಾನಿಗಳ ಪಟ್ಟಿಯಲ್ಲಿ ಯುವತಿಯರೂ ಇದ್ದಾರೆ.

ಅಪ್ಪ–ಅಮ್ಮ ಕೊಡುತ್ತಿದ್ದ ಪಾಕೆಟ್ ಮನಿಯಲ್ಲಿ 100 ಕಿ.ಮೀ/ಗಂಟೆ ವೇಗದ ಬೈಕ್ ಕೊಳ್ಳುವುದೇ ದುಸ್ತರ ಎಂಬಂತಿದ್ದ ಸಂದರ್ಭದಲ್ಲಿ, ಅದೇ ದುಡ್ಡಿಗೆ 150 ಕಿ.ಮೀ/ವೇಗದಲ್ಲಿ ಓಡುವ ಬೈಕ್‌ಗಳೂ ಈಗ ಸಿಗುತ್ತಿವೆ. ಮನೆ ಬಳಿ ಓಡಾಡಲು ಅಪ್ಪನ ಸ್ಪ್ಲೆಂಡರ್, ಅಮ್ಮನ ಆ್ಯಕ್ಟಿವಾಗಳನ್ನು ಬಳಸುವ ಕಾಲೇಜು ಹುಡುಗರಿಗೆ, ತಮ್ಮದೇ ಬೈಕ್ ಆಗಿ ಈ ವೇಗದ ಕುದುರೆಗಳೇ ಬೇಕು ಎಂಬುದು ಈಗಿನ ಟ್ರೆಂಡ್.

'ನನ್ ಮಗ ಅದ್ಯಾವ್ದೊ ಬೈಕ್ ಕೇಳ್ತಿದ್ದ, ಕೆಟಿಎಂ ಅಂಥ. ಕೊಡುಸ್ದೆ. 1.20 ಆಯ್ತು. ಬರ್ರ್ ಅಂಥ ಹೋಗುತ್ತೆ...' –ಮುಂಜಾವಿನಲ್ಲಿ ಗಡ್ಡ ಕೆರಿಸಲು ಸಲೂನ್ ಶಾಪ್‌ಗೆ ಬಂದ ಮಧ್ಯವಯಸ್ಕ ಪುರುಷರ ನಡುವೆ ಚರ್ಚೆಯಾಗುವ ವಿಷಯವಿದು. ಬೆಳಗ್ಗಿನ ಹೊತ್ತು ಜಾಗಿಂಗ್ ಮಾಡಿ, ಹೋಟೆಲ್‌ಗಳಿಗೆ ಟೀ ಕುಡಿಯಲು ಬರುವ ಅಂಕಲ್‌ಗಳೂ ಇದೇ ವಿಷಯ ಮಾತನಾಡುತ್ತಾರೆ.

ಮೊದಲೆಲ್ಲಾ ಹತ್ತಾರು ಲಕ್ಷದ ಹಾರ್ಲೆ ಡೇವಿಡ್‌ಸನ್ ಮತ್ತು ಇತರ ಸೂಪರ್ ಬೈಕ್ ಮಾಲೀಕರು ಮಾತ್ರ ವಾರಾಂತ್ಯದಲ್ಲಿ ಗುಂಪು ಕಟ್ಟಿಕೊಂಡು ಸವಾರಿ ಹೊರಡುತ್ತಿದ್ದರು. ಈಗ ಹೀಗೆ ಸವಾರಿ ಹೊರಡುವ ಸಣ್ಣ ಸ್ಪೋರ್ಟ್ಸ್ ಬೈಕರ್‌ಗಳ ಗುಂಪುಗಳ ಸಂಖ್ಯೆ ಹೆಚ್ಚಾಗಿದೆ.

ದಶಕದ ಹಿಂದೆ ಮಾರುಕಟ್ಟೆಯಲ್ಲಿ ಇಂತಹ ಕೇವಲ ಒಂದೇ ಒಂದು ಬೈಕ್ ಇತ್ತು. ಈಗ ಅವುಗಳ ಸಂಖ್ಯೆ 20 ದಾಟಿದೆ. ಹೀಗಾಗಿ, ಈಗಷ್ಟೇ ದುಡಿಯಲು ಆರಂಭಿಸಿರುವ ಸಣ್ಣ ಸಂಬಳದ ಹುಡುಗರಿಗೂ ಈ ಬೈಕ್‌ಗಳು ಕೈಗೆಟಕುತ್ತಿವೆ. ಜನಸಾಮಾನ್ಯರ ಕಮ್ಯೂಟರ್ ಬೈಕ್ ಎಂಬ 100 ಸಿಸಿ ಬೈಕ್‌ಗಳ ಹೆಗ್ಗಳಿಕೆಯನ್ನು ಈ ಪ್ರವೇಶಮಟ್ಟದ ಸ್ಪೋರ್ಟ್ಸ್ ಬೈಕ್‌ಗಳು ಈಗ ಕಸಿದುಕೊಂಡಿವೆ.

## ಕೈಗೆಟುಕುವ ಕ್ರೂಸರ್‌ಗಳು

ಒಂದು ಕಾಲದಲ್ಲಿ ಕ್ರೂಸರ್‌ಗಳೆಂದರೆ ಹಾರ್ಲೆ ಡೇವಿಡ್‌ಸನ್ ಬೈಕ್‌ಗಳು ಮಾತ್ರವಾಗಿದ್ದವು. ಭಾರಿ ಗಾತ್ರದ ಟೈರ್‌ಗಳು, ಎದೆನಡುಗಿಸುವ ಶಬ್ದ ಎಂತಹವರೂ ಅವುಗಳತ್ತ ನೋಡಲೇಬೇಕಿತ್ತು. ಜಾಗತಿಕ ಮಟ್ಟದಲ್ಲಿ ಹಾರ್ಲೆ ಡೇವಿಡ್‌ಸನ್ ಬೈಕ್‌ಗಳಿಗಿಂತ ಉತ್ತಮ ಬೈಕ್‌ಗಳಿದ್ದರೂ, ಅವು ಭಾರತಕ್ಕೆ ಕಾಲಿಟ್ಟಿರಲಿಲ್ಲ. ಕೆಲವು ಕಂಪೆನಿಗಳು ಇಂದಿಗೂ ಭಾರತದತ್ತ ನೋಡುತ್ತಿಲ್ಲ.

ಆದರೆ ಭಾರತೀಯರಿಗೆ ಮಾತ್ರ ಕ್ರೂಸರ್‌ಗಳ ಬಗ್ಗೆ ಪ್ರೀತಿ ಎಂದಿನಂತೆಯೇ ಇದೆ. ಹಾಗೆ ನೋಡಿದರೆ, ಅತ್ಯಂತ ಕಡಿಮೆ ಬೆಲೆಗೆ ಮತ್ತು ಕಡಿಮೆ ಸಾಮರ್ಥ್ಯದ ಕ್ರೂಸರ್ ಅನ್ನು ಭಾರತಕ್ಕೆ ಪರಿಚಯಿಸಿದ ಶ್ರೇಯ ಸಹ ಯಮಾಹಕ್ಕೆ ಸಲ್ಲುತ್ತದೆ. ಸುಮಾರು 16– 18 ವರ್ಷಗಳ ಹಿಂದೆಯೇ ಯಮಾಹ 125 ಸಿ.ಸಿ ಸಾಮರ್ಥ್ಯದ ಎಂಟೇಸರ್ ನಮ್ಮ ರಸ್ತೆಗೆ ಇಳಿದಿತ್ತು.

ಕ್ರೂಸರ್‌ಗಳ ತೀರಾ ವೇಗವಲ್ಲದ ಆದರೆ ಆರಾಮದಾಯಕ ಮತ್ತು ದೂರದ ಪ್ರಯಾಣಕ್ಕೆ ಹೇಳಿ ಮಾಡಿಸಿದ ಬೈಕ್‌ಗಳು. ನೂರಾರು ಕಿ.ಮೀ ದೂರದ ಸವಾರಿಯ ನಂತರವೂ, ಮೈ– ಕೈ ನೋವಾಗದ ಕ್ರೂಸರ್‌ಗಳ ಪಯಣಸುಖ ಅನುಭವಿಸಿದರಿಗಷ್ಟೇ ಗೊತ್ತು. ಅಂತಹ ಅನುಭವವನ್ನು ಅತ್ಯಂತ ಕಡಿಮೆ ಬೆಲೆಗೆ ಭಾರತೀಯರಿಗೆ ಯಮಾಹ ಕಟ್ಟಿಕೊಟ್ಟಿತ್ತು. ಎಂಟೇಸರ್ ಅನ್ನು ಅನುಸರಿಸಿ ಕವಾಸಕಿ– ಬಜಾಜ್ ಎಲಿಮನೇಟರ್ ಅನ್ನು ಭಾರತಕ್ಕೆ ಪರಿಚಯಿಸಿತು. ಎಲಿಮನೇಟರ್‌ನ ಇಂದಿನ ರೂಪವೇ ಬಜಾಜ್ ಅವೆಂಜರ್. ಅವೆಂಜರ್ ಭಾರತದಲ್ಲಿ ಅತ್ಯಂತ ಕಡಿಮೆ ಬೆಲೆಗೆ ಲಭ್ಯವಿರುವ ಪೂರ್ಣ ಪ್ರಮಾಣದ ಕ್ರೂಸರ್. ಕಡಿಮೆ ಸಾಮರ್ಥ್ಯ ಎಂಬುದನ್ನು ಹೊರತುಪಡಿಸಿದರೆ, ಅದರಲ್ಲಿ ಬೇರೆ ಯಾವುದೇ ಕೊರತೆ ಇಲ್ಲ.

